<u>ಅಸಲು ದಾವಾ ಸಂಖ್ಯೆ: **- 29/2015**</u>          ಪಿ.ಡಬ್ಲ್ಯೂ**:-1**

ದಿನಾಂಕಃ **04.12.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- **1** ನೇ ಪ್ರತಿವಾದಿ ಪರ ವಕೀಲರಿಂದ :-</u>

ನನ್ನ ತಂದೆಯ ಹೆಸರು ಚನ್ನವೀರಪ್ಪಗೌಡ. ನಮ್ಮ ತಂದೆಗೆ 3 ಜನ ಹೆಂಡತಿಯರು ಅಂದರೆ ಹಾಲಮ್ಮ, ಹಿರಿಯಮ್ಮ, ಮತ್ತು ಬಸಮ್ಮ. ನಮ್ಮ ತಂದೆಯವರು ಮೊದಲಿಗೆ ಹಾಲಮ್ಮರವರನ್ನು ಮದುವೆಯಾಗಿದ್ದು ಅವರ ಮರಣದ ನಂತರ ಹಿರಿಯಮ್ಮರವರನ್ನು ಮದುವೆಯಾಗಿದ್ದು ಮತ್ತು ಅವರು ಮರಣ ಹೊಂದಿದ ನಂತರ ಬಸಮ್ಮರವರನ್ನು ಮದುವೆಯಾಗಿರುತ್ತಾರೆ. ಹಾಲಮ್ಮರವರಿಗೆ ಒಬ್ಬ ಮಗಳು ಅಂದರೆ ಸಾವಿತ್ರಮ್ಮ, ಹಿರಿಯಮ್ಮರವರಿಗೆ ಒಬ್ಬ ಮಗ ಅಂದರೆ ರಾಮಪ್ಪ ಮತ್ತು ಬಸಮ್ಮರವರಿಗೆ 3 ಜನ ಹೆಣ್ಣು ಮಕ್ಕಳು, ಒಬ್ಬ ಮಗ ಅಂದರೆ ರತ್ನಮ್ಮ, ಹಾಲಸ್ವಾಮಿ, ಸುಧಾ, ಹೇಮಾವತಿ. ಸಾವಿತ್ರಮ್ಮರವರಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣುಮಕ್ಕಳು ಅಂದರೆ ಹಾಲಸ್ವಾಮಿ, ಹಾಲಮ್ಮ ಮತ್ತು ಸಿದ್ದಮ್ಮ. ನಮ್ಮ ತಂದೆಯ ಆಸ್ತಿಯಲ್ಲಿ ನಮಗೂ ಭಾಗಾಂಶ ಬೇಕೆಂದು ಕೋರಿ ದಾವೆಯನ್ನು ಸಲ್ಲಿಸಿದ್ದೇನೆ. ಕುರುವ ಗ್ರಾಮದಲ್ಲಿರುವ ಸರ್ವೇ ನಂ.92 ರಲ್ಲಿ 6 ¼ ಎಕರೆ ಜಮೀನು, ಸರ್ವೇ ನಂ.192, ಸರ್ವೇ ನಂ.135, ಸರ್ವೇ ನಂ.145 ಮತ್ತು ಮನೆಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದೆನು. ನಾನು ಹೇಳಿದಂತಹ ಮೇಲ್ಕಂಡ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ನನ್ನ ತಂದೆಯ 3 ಜನ ಹೆಂಡತಿಯ ಮಕ್ಕಳಿಗೆ ದಾವಾ ಆಸ್ತಿಗಳಲ್ಲಿ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿ. **1** ನೇ ಪ್ರತಿವಾದಿಯ ಮಕ್ಕಳು ಭಾಗಾಂಶ ಕೋರಿ ಸಾವಿತ್ರಮ್ಮನ ವಿರುದ್ಧ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ**.** ಸರ್ವೇ ನಂ.92 ರಲ್ಲಿ 6 ಎಕರೆ 29 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೇ ನಂ.192 ರಲ್ಲಿ 6 ಎಕರೆ 6 ಗುಂಟೆ ಜಮೀನು ಇದೆ

ಎಂದರೆ ಸರಿ. ಸರ್ವೇ ನಂ.132/1 ಪಿ1 ರಲ್ಲಿ 10 ಎಕರೆ 24 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೇ ನಂ.56/1 ರಲ್ಲಿ 2 ಎಕರೆ ಜಮೀನು ಕುರುವ ಗ್ರಾಮದಲ್ಲಿದೆ ಎಂದರೆ ಸರಿ. ಸರ್ವೇ ನಂ.56/1 ರಲ್ಲಿರುವ 2 ಎಕರೆ ಜಮೀನು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಸರ್ವೇ ನಂ.56/1 ರಲ್ಲಿರುವ 2 ಎಕರೆ ಜಮೀನನ್ನು ಈ ದಾವಾ ಪತ್ರದಲ್ಲಿ ಸೇರಿಸಿಲ್ಲ  ಎಂದರೆ ಸರಿ. ಸದರಿ ಆಸ್ತಿಯನ್ನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಂದೆಯ 3 ಜನ ಹೆಂಡತಿಯ ಮಕ್ಕಳಿಗೆ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿ. ಆ ಪ್ರಕಾರ ನ್ಯಾಯಾಲವು ಡಿಕ್ರಿ ಮಾಡಲು ನನಗೆ ಯಾವುದೇ ತಕರಾರು ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.